ದಿನಾಂಕಃ 17-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ಆರೋಪಿ ಮತ್ತು ನನ್ನ ನಡುವೆ ಸುಮಾರು 3 ವರ್ಷಗಳಿಂದ ಹಣಕಾಸಿನ ವ್ಯವಹಾರ ನಡೆಯುತ್ತಿದ್ದೆ. ನಾನು ಆರೋಪಿಗೆ ರೂ. 90,000 ಹಣವನ್ನು ಗೂಗಲ್ ಪೇ ಮೂಲಕ ಪಾವತಿ ಮಾಡಿರುತ್ತೇನೆ. ನಾನು ಆರೋಪಿಗೆ ಎರಡು ಬ್ಯಾಂಕಿನ ಖಾತೆಯ ಮೂಲಕ ಹಣ ನೀಡಿರುತ್ತೇನೆ. ಯೂನಿಯನ್ ಬ್ಯಾಂಕ್ ಮೂಲಕ ರೂ. 60,000/- ಮತತು ಕೆನರಾ ಬ್ಯಾಂಕ್ ಮೂಲಕ ರೂ. 30,000/- ಹಣ ನೀಡಿರುತ್ತೇನೆ. ಆರೋಪಿಗೆ ನನ್ನ ಬ್ಯಾಂಕಿನ ಖಾತೆಯ ಮೂಲಕ ಜಮೆ ಆಗಿರುವ ಮೂಲಕ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ವಿಷಯವನ್ನು ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ.

2) ಆರೋಪಿಗೆ ರೂ.10,000/- ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ನಾನು ಆರೋಪಿಗೆ ರೂ. 1 ಲಕ್ಷಹಣವನ್ನು ನೀಡಿರುತ್ತೇನೆ. ಆರೋಪಿ ನನಗೆ ರೂ. 1,50,000/- ಮೊತ್ತಕ್ಕಾಗಿ ಚೆಕ್ಕು ನೀಡಿರುತ್ತಾರೆ. ಆರೋಪಿ 6 ತಿಂಗಳ ಒಳಗಾಗಿ ಹಣವನ್ನು ಮರುಪಾವತಿ ಮಾಡುತ್ತೇನೆ ಎಂದು ತಿಳಿಸಿರುತ್ತಾರೆ. ದಿನಾಂಕ 07.02.2024 ರಂದು ನನ್ನ ಮತ್ತು ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ರೂ. 1 ಲಕ್ಷ ಹಣದ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ